**OS No. 210/2023**
**ಪಿ.ಡಬ್ಲ್ಯೂ: 1**

**ದಿನಾಂಕ: 08-12-2025 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿಯ ಪರ: ಶ್ರೀ ಜಿ. ಬಿ. ಆರ್ ವಕೀಲರಿಂದಃ**

1. ನಾನು ಮತ್ತು ವಾದಿ ಒಂದೇ ಊರಿನವರು. ಪ್ರತಿವಾದಿ ನಮ್ಮ ಊರಿನವರು. ಸದರಿ ಪ್ರತಿವಾದಿಯು ಕೌಟುಂಬಿಕ ಅಡಚಣೆ ಸಲುವಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಲು ತಯಾರಾದಾಗ ನಾನು ಮಾತು-ಕತೆಗೆ ಹೋಗಿರುತ್ತೇನೆ. ಸದರಿ ಮಾತು-ಕತೆ ಮಾಡುವಾಗ ಶಂಕರಪ್ಪ ತಂದೆ ನಾಗಪ್ಪ, ಸಿದ್ರಾಮ ತಂದೆ ಮಲ್ಲಯ್ಯ, ಸಾಬಣ್ಣ ತಂದೆ ಬಸಲಿಂಗಪ್ಪ, ಸಾಬಣ್ಣ ತಂದೆ ಲಕ್ಷ್ಮಣ್ಣ, ನಿಂಗಪ್ಪ ತಂದೆ ಮಲ್ಲಯ್ಯ, ತಿಪ್ಪಣ್ಣ ತಂದೆ ಭೀಮಣ್ಣ ಗೊಸೆ, ಇವರನ್ನು ಹೊರತುಪಡಿಸಿ ಬೇರೆಯವರ ಬಗ್ಗೆ ನನಗೆ ನೆನಪು ಇರುವುದಿಲ್ಲ. ಪ್ರತಿವಾದಿಯು ದಾವಾ ಆಸ್ತಿಯನ್ನು ಮಾರಾಟ ಮಾಡಲು ಏನು ತೊಂದರೆ ಇರುತ್ತದೆ ಎಂದು ನನಗೆ ಗೊತ್ತಿಲ್ಲ.

2. ಶರಣಪ್ಪ ತಂದೆ ಗೋವಿಂದಪ್ಪ ನನಗೆ ಗೊತ್ತು. ಸದರಿ ದಾವಾ ಆಸ್ತಿ ಮತ್ತು ಇತರ ಆಸ್ತಿಗಳು ಪ್ರತಿವಾದಿ ಮತ್ತು ಅವರ ಮಾವ ಶರಣಪ್ಪ ಇವರ ಹೆಸರಿನಲ್ಲಿ ಜಂಟಿಯಾಗಿ ನಮೂದು ಇರುತ್ತದೆ ಎಂದರೆ ಸಾಕ್ಷಿಯು ದಾವಾ ಆಸ್ತಿಯು ಜಂಟಿಯಾಗಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಮಾತು-ಕತೆ ಸಮಯದಲ್ಲಿ ಪಹಣಿ ನೋಡಿರುವುದಿಲ್ಲ. ಪ್ರತಿವಾದಿಯು ಶಾಲೆ ಕಲಿತಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಾನು ವಾದಿಯರ ಮಾತು ಕೇಳಿ ಮಾತು-ಕತೆ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮಾತು-ಕತೆಗೆ ಇಬ್ಬರೂ ಕರೆದಿರುತ್ತಾರೆ. ಸದರಿ ಬಳಿಚಕ್ರ ಗ್ರಾಮದ ಹಳೆಯ ಬ್ಯಾಂಕ್ ಹತ್ತಿರ ಇರುವ ಬೇವಿನ ಮರದ ಹತ್ತಿರ ಮಾತು-ಕತೆ ಆಗಿರುತ್ತದೆ. ದಾವಾ ಆಸ್ತಿಯ ಮೌಲ್ಯ ಎಷ್ಟು ಆಗಿರುತ್ತದೆ ಎಂದರೆ 70,000/- ರೂ. ಇಂದ ಪ್ರಾರಂಭವಾಗಿ 50,000/- ರೂ. ಗೆ ನಿಶ್ಚಯವಾಗಿರುತ್ತದೆ. ಬಳಿಚಕ್ರ ಗ್ರಾಮದಲ್ಲಿ 1 ಎಕರೆ ಜಮಿನಿಗೆ ಸುಮಾರು 15 ರಿಂದ 20 ಲಕ್ಷ ಇರುತ್ತದೆ ಎಂದರೆ ಸಾಕ್ಷಿಯು ಸನಃ 2014 ರಲ್ಲಿ ಕಡಿಮೆ ಇತ್ತು ಎಂದು

ನುಡಿಯುತ್ತಾರೆ. ಸರಕಾರದ ಮೌಲ್ಯ ದರಪಟ್ಟಿ ಪ್ರಕಾರ ಎಷ್ಟು ಕಿಮ್ಮತ್ತು ಇತ್ತು ಎಂದು ನನಗೆ ಗೊತ್ತಿಲ್ಲ. ನಾನು ವಾದಿಯ ಮಾತು ಕೇಳಿ 50,000/- ರೂ. ಗೆ ಜಮೀನು ಮಾರಾಟ ಮಾಡಲು ನಿಶ್ಚಯವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಮಾತು-ಕತೆ ಆದಾಗ ಲಿಖಿತವಾಗಿ ಕರಾರು ಆಗಿರುತ್ತದೆಯಾ? ಎಂದರೆ ಸಾಕ್ಷಿಯು ಆಗಿರುವುದಿಲ್ಲ ಏಕೆಂದರೆ ಆ ದಿನ ಸ್ಟ್ಯಾಂಪ್ ತಂದಿರುವುದಿಲ್ಲ. ದಿನಾಂಕಃ 11-07-2014 ರಂದು ಖರೀದಿ ಕರಾರು ಪತ್ರ ಆಗಿರುತ್ತದೆ. ಸದರಿ ಖರೀದಿ ಕರಾರು ಪತ್ರವು ಮುಕ್ಕಣ್ಣ ತಂದೆ ಮಲ್ಲಣ್ಣ ಬಡಿಗೇರ ಇವರ ಮನೆಯ ಅಂಗಳದಲ್ಲಿ ಆಗಿದ್ದು, ಅವರೇ ಬರೆದಿರುತ್ತಾರೆ. ಸದರಿ ಖರೀದಿ ಕರಾರು ಪತ್ರ ಆಗುವಾಗ ನಾನು, ಶಂಕ್ರಪ್ಪ ನಾಗಪ್ಪ, ಸಿದ್ರಾಮಪ್ಪ ತಂದೆ ಮಲ್ಲಯ್ಯ, ಸಾಬಣ್ಣ ತಂದೆ ಬಸಲಿಂಗಪ್ಪ, ಸಾಬಣ್ಣ ತಂದೆ ಲಕ್ಷ್ಮಣ, ನಿಂಗಪ್ಪ ತಂದೆ ಮಲ್ಲಯ್ಯ ಇಷ್ಟು ಜನ ಇರುವುದರ ಬಗ್ಗೆ ನೆನಪು ಇರುತ್ತದೆ. ನಾನು ಹೇಳಿದ ಎಲ್ಲರೂ ಸಹಿ ಹಾಕಿರುತ್ತಾರೆ. ಖರೀದಿ ಕರಾರು ಪತ್ರದ ದಿನ ಹಣ ಕೊಟ್ಟಿರುತ್ತಾರಾ? ಎಂದರೆ ಸಾಕ್ಷಿಯು ಹಣ ಮುಟ್ಟಿರುತ್ತದೆ ಎಂದು ಮಾರಾಟಗಾರರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನನ್ನ ಮುಂದೆ ಯಾವುದೇ ಹಣ ನೀಡಿರುವುದಿಲ್ಲ. ಸದರಿ ಖರೀದಿ ಕರಾರು ಪತ್ರ ಮಾಡಿದ ನಂತರ ಮುಂಬರುವ ಮಾರ್ಚ ತಿಂಗಳ ಒಳಗಡೆ ಖರೀದಿ ಪತ್ರ ಮಾಡಿಕೊಡಲು ಷರತ್ತು ಇತ್ತು. ಸದರಿ ಖರೀದಿ ಪತ್ರ ಮಾಡಿಕೊಟ್ಟಿದ್ದರ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಖರೀದಿ ಪತ್ರ ಪ್ರತಿವಾದಿಯು ಮಾಡಿಕೊಟ್ಟಿಲ್ಲ ಎಂದು ನನಗೆ ವಾದಿಯು ತಿಳಿಸಿರುವುದಿಲ್ಲ. ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಖರೀದಿ ಕರಾರು ಪತ್ರ ಸೃಷ್ಟಿ ಮಾಡಿ ನಾನು ಮತ್ತು ವಾದಿ ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**